CC 5125/2023

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಗಳ ನ್ಯಾಯಾಲಯ, ಹೊಸಪೇಟೆ.**

**ಸಿಸಿ ನಂಬರ್ 5125/2023**

**ಸಿ ಡಬ್ಲ್ಯೂ - 3**

**ಪಿ ಡಬ್ಲ್ಯೂ - 3**

| | |
|---|---|
| **ಸಾಕ್ಷಿಯ ಹೆಸರು -** | **ಹನುಮಂತಪ್ಪ** |
| **ತಂದೆಯ ಹೆಸರು -** | **ಈರಣ್ಣ** |
| **ವಯಸ್ಸು -** | **40 ವರ್ಷಗಳು** |
| **ಉದ್ಯೋಗ -** | **ಕಾರ್ಯನಿರ್ವಾಹಕ ಅಧಿಕಾರಿ, ಹಂಪಿ ವಿರೂಪಾಕ್ಷೇಶ್ವರ ದೇವಸ್ಥಾನ** |
| **ವಾಸಸ್ಥಳ -** | **ಬಳ್ಳಾರಿ** |

**ಸಾಕ್ಷಿಯನ್ನು ದಿನಾಂಕಃ 10-01-2025 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ಚಾಸಾ **-1, 2** ರವರ ಪರಿಚಯ ಇರುತ್ತದೆ. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿರುತ್ತೇನೆ.

ಈಗ ನಾನು ನೋಡುತ್ತಿರುವ ಪಂಚನಾಮೆಯಲ್ಲಿನ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ಪಂಚನಾಮೆಯಲ್ಲಿನ ಸಹಿ ನೋಡಿ ಗುರುತಿಸಿರುತ್ತಾರೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿಃ **2** ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿಃ **2 (**ಸಿ**)** ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ಪೋಲಿಸ ಠಾಣೆಯಲ್ಲಿ ಮಾಡಿರುತ್ತೇನೆ. ನನ್ನೊಂದಿಗೆ ಆ ದಿನ ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯರು ಮತ್ತು ಒಬ್ಬ ಪೋಲಿಸರು ಇದ್ದರು.

**2024** ರ ಯಾವುದೋ ಒಂದು ತಿಂಗಳಲ್ಲಿ ದಿನಾಂಕ **24** ರಂದು ಚಾಸಾ **-1** ರವರು ಬೆಳಿಗ್ಗೆ **06-00** ಗಂಟೆಗೆ ನನಗೆ ಕರೆ ಮಾಡಿ ಗಾಂಜಾ ಪ್ರಕರಣವೊಂದರಲ್ಲಿ ಪಂಚನಾಮೆ ಮಾಡುವುದಿದೆ ಬನ್ನಿ ಎಂದು ಕರೆದರು.

ನಾನು ಸಿಬ್ಬಂದಿಗಳನ್ನು ಕಳುಹಿಸುತ್ತೇನೆ ಎಂದು ಹೇಳಿದರೂ ಸಹ ನಾನೇ ಬರಬೇಕು ಎಂದು ನನ್ನನ್ನು ಕರೆದರು. ನಾನು ಬೆಳಿಗ್ಗೆ 08-00 ರಿಂದ 08-30 ಗಂಟೆಗೆ ಹಂಪಿ ಪೋಲಿಸ ಠಾಣೆಗೆ ಹೋಗಿರುತ್ತೇನೆ.

ಚಾಸಾ -1 ರವರು ಈಶ್ವರ ದೇವಸ್ಥಾನದಿಂದ ಕೆಳಗೆ ಹೋಗುವ ಕಡ್ಡಿರಾಂಪೂರ ಗ್ರಾಮದ ಕಡೆಗೆ ನನ್ನನ್ನು ಕರೆದುಕೊಂಡು ಹೋಗಿರುತ್ತಾರೆ. ಚಾಸಾ -1 ರವರು ಸ್ಥಳದಲ್ಲಿದ್ದ ಮಂಜು ಮತ್ತು ಗೌತಮ್ ಎಂಬ ಹುಡುಗರ ಅಂಗಶೋಧನೆ ಮಾಡಿದರು. ಸದರಿಯವರ ಕಡೆಯಿಂದ 2 ಪ್ಲಾಸ್ಟಿಕ್ ಚೀಲಗಳು ದೊರೆತವು. ಚಾಸಾ -1 ರವರು ಸ್ಥಳಕ್ಕೆ ತಂದಿದ್ದ ತೂಕದ ಯಂತ್ರದಲ್ಲ ಸದರಿ ಪ್ಲಾಸ್ಟಿಕ್ ಚೀಲಗಳನ್ನು ತೂಕ ಮಾಡಿರುತ್ತಾರೆ. ಸದರಿ ಪ್ಲಾಸ್ಟಿಕ್ ಚೀಲಗಳನ್ನು ಸ್ಥಳದಲ್ಲಿಯೇ ಶೀಲ್ ಮಾಡಿರುತ್ತಾರೆ. ಸದರಿ ಸ್ಥಳದಲ್ಲಿ ವಿಡಿಯೋ ಮತ್ತು ಪೋಟೋಗಳನ್ನು ತೆಗೆಯಲಾಗಿತ್ತು. ಸ್ಥಳದಲ್ಲಿ ಪಂಚನಾಮೆಯನ್ನು ಮಾಡಲಾಗಿತ್ತು. ಸಾಕ್ಷಿ ನಿಪಿಃ 4 ರ ಪೋಟೋಗಳನ್ನು ನೋಡಿ ಗುರುತಿಸಿರುತ್ತಾರೆ.

ಸ್ಥಳದಲ್ಲಿ ಪ್ರಿಂಟ್ ತೆಗೆಯಲು ಆಗದಿದ್ದ ಕಾರಣ ನಮ್ಮನ್ನು ಠಾಣೆಗೆ ಕರೆದುಕೊಂಡು ಹೋಗಿದ್ದರು. ಠಾಣೆಯಲ್ಲಿ ಪ್ರಿಂಟ್ ತೆಗೆದ ನಂತರ ನಾನು ದಾಖಲೆಗೆ ಸಹಿ ಮಾಡಿ ನನ್ನ ಕಚೇರಿಗೆ ಹೋಗಿರುತ್ತೇನೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಎ.ಪಿ.ಪಿ. ಅವರು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)**

**CC 5125/2023**

**ಸಿ ಡಬ್ಲೂ - 3**

**ಪಿ ಡಬ್ಲೂ - 3**

**ಪಾಟೀ ಸವಾಲು ಮಾನ್ಯ ಎ ಪಿ ಪಿ ಅವರಿಂದಃ**

ದಿಃ 24-06-2023 ರಂದು ಬೆಳಿಗ್ಗೆ 08-45 ರಿಂದ 10-15 ರವರೆಗೆ ನಿಪಿಃ 2 ರ ಪಂಚನಾಮೆಯನ್ನು ಕೃತ್ಯ ಸ್ಥಳದಲ್ಲಿ ಮಾಡಲಾಗಿತ್ತು ಅಂದರೆ ಸರಿ. ಆ ದಿನ ಚಾಸಾ -1, 2, 6 ಮತ್ತು 11, 13, 16 ರವರು ಸ್ಥಳದಲ್ಲಿ ಇದ್ದರು ಅಂದರೆ ಸರಿ. ಸದರಿಯವರು ಪಂಚನಾಮೆಗೆ ಸಹಿ ಮಾಡಿರುತ್ತಾರೆ ಅಂದರೆ ಸರಿ. ಮು ಮಾ 1 ನ್ನು ನನ್ನ ಸಮಕ್ಷಮ ಜಪ್ತು ಮಾಡಿದ್ದರು ಅಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಟಿ ಎಲ್ ಎಸ್ ಕೆ., ವಕೀಲರಿಂದ**

ನಾನು ಕಾರ್ಯನಿರ್ವಾಹಕ ಅಧಿಕಾರಿ ಎಂದು ಕೆಲಸ ಮಾಡುತ್ತಿದ್ದೇನೆ. ಪೋಲಿಸರು ನನಗೆ ಪಂಚನಾಮೆಗೆ ಬರಲು ನೋಟಿಸ್ ನ್ನು ನೀಡಿದ್ದರು. ಪಂಚನಾಮೆಗೆ ಹೋಗುವುದಕ್ಕೂ ಮೊದಲು ನಾನು ಮೇಲಾಧಿಕಾರಿಯಿಂದ ಅನುಮತಿಯನ್ನು ಪಡೆಯಲಿಲ್ಲ. ನನ್ನ ಮೇಲಾಧಿಕಾರಿಗಳ ಅನುಮತಿ ಇಲ್ಲದೇ ನಮ್ಮ ಕಚೇರಿಯನ್ನು ಬಿಟ್ಟು ಹೋಗಲು ಬರುವುದಿಲ್ಲ ಎಂದು ನನಗೆ ಗೊತ್ತು. ಪಂಚನಾಮೆಗೆ ಹೋಗುತ್ತಿದ್ದೇನೆ ಎಂದು ನಮ್ಮ ಕಚೇರಿಯ ಲಾಗ್ ಬುಕ್ ನಲ್ಲಿ ಬರೆದು ಸಹಿ ಮಾಡಿಲ್ಲ.

ಚಾಸಾ -1 ರವರು ನನಗೆ ಕರೆ ಮಾಡಿದಾಗ ನಾನು ಬಳ್ಳಾರಿಯಲ್ಲಿ ಇದ್ದೆ. ನಾನು ಬಳ್ಳಾರಿಯಿಂದ ಹಂಪಿಗೆ ಬಂದಾಗ ಬೆಳಿಗ್ಗೆ 08-30 ಗಂಟೆ ಆಗಿತ್ತು. ನಾನು ಬಸ್ ನಲ್ಲಿ ಹಂಪಿಗೆ ಬಂದಿರುತ್ತೇನೆ. ಹೊಸಪೇಟೆ-ಬಳ್ಳಾರಿ ರಸ್ತೆ ದುರಸ್ಥಿ ಆಗುತ್ತಿರುವುದರಿಂದ ಕನಿಷ್ಠ 2 ಗಂಟೆ ಪ್ರಯಾಣ ಮಾಡಬೇಕಾಗುತ್ತದೆ ಅಂದರೆ ಸರಿ.

ನಾನು ಪಿ ಕೆ ಹಳ್ಳಿಯಲ್ಲಿ ಇಳಿದು ಹೋಗಿದ್ದೆ ಎಂದು ನುಡಿಯುತ್ತಾರೆ. ಪೋಲಿಸರು ನನಗೆ ನೋಟಿಸ್ ನ್ನು ವಿರೂಪಾಕ್ಷೇಶ್ವರ ದೇವಸ್ಥಾನದಲ್ಲಿ ನೀಡಿರುತ್ತಾರೆ. ನೋಟಿಸ್ ನೀಡಿದಾಗ ಅದನ್ನು ಓದಿ ಸಹಿ ಮಾಡಿರುತ್ತೇನೆ ಅಂದರೆ ಸರಿ.

ಈಗ ನಾನು ನೋಡುತ್ತಿರುವ ಅಂತಿಮ ವರದಿಯಲ್ಲಿನ ನೋಟಿಸ್ ನಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ನೋಟಿಸ್ ವೊಂದರಲ್ಲಿನ ಸಹಿ ನೋಡಿ ಗುರುತಿಸಿರುತ್ತಾರೆ. ಸದರಿ ನೋಟಿಸ್ ನಿಡಿಃ **2** ಎಂದು, ಸಾಕ್ಷಿಯ ಸಹಿಯನ್ನು ನಿಡಿಃ **2** (ಎ) ಎಂದು ಗುರುತಿಸಲಾಯಿತು. ಸದರಿ ನೋಟಿಸ್ ನಲ್ಲಿ ದಿಃ **26-03-2023** ರಂದು ಅಕ್ರಮ ಗಾಂಜಾ ಸಾಗಾಣಿಕೆ ಮಾಡುವವರ ಮೇಲೆ ದಾಳಿ ಮಾಡಬೇಕಾಗಿದೆ ಎಂದು ಬರೆಯಲಾಗಿದೆ ಅಂದರೆ ಸರಿ.

ಪೋಲಿಸ ಠಾಣೆಯಿಂದ ಗುನ್ಹಾ ಸ್ಥಳಕ್ಕೆ ನಾನು ಪೋಲಿಸರ ಕಾರ್ ನಲ್ಲಿ ಹೋಗಿರುತ್ತೇನೆ. ಕಾರ್ ನಲ್ಲಿ ಎಷ್ಟು ಜನ ಇದ್ದರು ಎಂದು ನನಗೆ ನೆನಪಿಲ್ಲ. ನನ್ನೊಂದಿಗೆ ಪಿ ಎಸ್ ಐ, ಇತರೆ ಪೋಲಿಸರು ಮತ್ತು ಚಾಸಾ **-6** ರವರು ಇದ್ದರು. ಪೋಲಿಸ ಠಾಣೆಯಿಂದ ಗುನ್ಹಾ ಸ್ಥಳ **1** ರಿಂದ ಒಂದೂವರೆ ಕಿ ಮೀ ಅಂತರ ಇರುತ್ತದೆ. ಪೋಲಿಸ ಠಾಣೆ ಬಿಟ್ಟಾಗ ಸಮಯ ಎಷ್ಟಾಗಿತ್ತು ಎಂದು ನಾನು ನೋಡಿಕೊಂಡಿಲ್ಲ. ಗುನ್ಹಾ ಸ್ಥಳಕ್ಕೆ ಹೋದಾಗ ಬೆಳಿಗ್ಗೆ **08-45** ಗಂಟೆ ಆಗಿತ್ತು.

ಗುನ್ಹಾ ಸ್ಥಳಕ್ಕೆ ಹೋಗುವುದಕ್ಕೂ ಮೊದಲು ಮತ್ತು ಹೋದ ನಂತರ ಪೋಲಿಸರ ಅಂಗಶೋಧನೆಯನ್ನು ನಾನು ಮಾಡಿರುವುದಿಲ್ಲ. ಕೆಲವು ಪೋಲಿಸರು ಮೋಟಾರ್ ಸೈಕಲ್ ಗಳಲ್ಲಿ ಬಂದಿದ್ದರು. ಆರೋಪಿತರನ್ನು ನೋಡಿ ಹೆಸರು ಹೇಳಲು ಅಗುವುದಿಲ್ಲ ಅಂದರೆ ಸರಿಯಲ್ಲ.

**CC 5125/2023**

**ಸಿ ಡಬ್ಲೂ - 3**

**ಪಿ ಡಬ್ಲೂ - 3**

ಸಾಕ್ಷಿ ನ್ಯಾಯಾಲಯದ ಮುಂದಿರುವ ಉದ್ದನೆಯ ಆರೋಪಿಯನ್ನು ನೋಡಿ ಮಂಜು ನಾಯಕ ಮತ್ತು ಇನ್ನೊಬ್ಬ ಆರೋಪಿಯನ್ನು ಗೌತಮ ಎಂದು ಗುರುತಿಸಿರುತ್ತಾರೆ. ನಾನು ಆರೋಪಿತರನ್ನು ಇದೇ ಮೊದಲ ಬಾರಿಗೆ ನೋಡಿರುತ್ತೇನೆ ಅಂದರೆ ಸರಿಯಲ್ಲ. ಪೋಲಿಸರು ಆರೋಪಿತರನ್ನು ಗುರುತಿಸುವಂತೆ ಹೇಳಿ ಕೊಟ್ಟಿದ್ದರಿಂದ ಈ ರೀತಿ ಸಾಕ್ಷ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ನಾವು ಗುನ್ನಾ ಸ್ಥಳಕ್ಕೆ ಹೋಗಿದ್ದೇವು ಎನ್ನಲಾದ ವಾಹನದ ನೋಂದಣಿ ಸಂಖ್ಯೆ ಹೇಳಲು ಆಗುವುದಿಲ್ಲ. ಯಾವ ಯಾವ ಪೋಲಿಸರು ಯಾವ ಯಾವ ವಾಹನದಲ್ಲಿ ಬಂದಿದ್ದರು ಎಂದು ನನಗೆ ಹೇಳಲು ಆಗುವುದಿಲ್ಲ ಅಂದರೆ ಸರಿ. ತೂಕದ ಯಂತ್ರ ಯಾವ ಕಂಪನಿಯದು ಎಂದು ನನಗೆ ಗೊತ್ತಿಲ್ಲ. ಪೋಟೋ ಮತ್ತು ವಿಡಿಯೋ ಮಾಡಿದ ಛಾಯಾಗ್ರಾಹಕನ ಹೆಸರು ನನಗೆ ಗೊತ್ತಿಲ್ಲ. ಯಾವ ಪೋಲಿಸರು ಅಂಗಶೋಧನೆಯನ್ನು ಮಾಡಿದರು ಎಂದು ನನಗೆ ಗೊತ್ತಿಲ್ಲ. ಪಂಚನಾಮೆಯನ್ನು ಸ್ಥಳದಲ್ಲಿಯೇ ಟೈಪ್ ಮಾಡಿರುತ್ತಾರೆ. ಯಾವ ಕಂಪನಿಯ ಲ್ಯಾಪ್ ಟಾಪ್ ನಲ್ಲಿ ಟೈಪ್ ಮಾಡಿದರು ಎಂದು ನನಗೆ ಗೊತ್ತಿಲ್ಲ. ಪಂಚನಾಮೆಯನ್ನು ಚಾಸಾ -1 ರವರೇ ಹೇಳಿ ಟೈಪ್ ಮಾಡಿಸಿರುತ್ತಾರೆ. ಪಂಚನಾಮೆಗೆ ಚಾಸಾ -1, 2, 6 ಮತ್ತು ವಿಡಿಯೋ ಗ್ರಾಫರ್ ಸಹಿ ಮಾಡಿರುತ್ತಾರೆ. ಈ ಎಲ್ಲಾ ಸಹಿಗಳನ್ನು ಪೋಲಿಸ ಠಾಣೆಯಲ್ಲಿ ಪಂಚನಾಮೆ ಪ್ರಿಂಟ್ ಆದ ನಂತರ ಮಾಡಲಾಯಿತು ಅಂದರೆ ಸರಿ. ಗುನ್ನಾ ಸ್ಥಳಕ್ಕೆ ಚೀಲವನ್ನು ಯಾರು ತಂದಿದ್ದರು, ಗಾಂಜಾವನ್ನು ತುಂಬಿ ಸೀಲು ಮಾಡಿದ್ದರು ಎಂದು ನನಗೆ ಗೊತ್ತಿಲ್ಲ.

ಮು ಮಾ ನ ಮೇಲೆ ಯಾರು ಷರಾ ಹಾಕಿರುತ್ತಾರೆ ಮತ್ತು ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಪಂಚನಾಮೆ ಸ್ಥಳಕ್ಕೆ ಹೋಗಿಲ್ಲ ಅಂದರೆ ಸರಿಯಲ್ಲ. ಪಂಚನಾಮೆ ಸ್ಥಳದ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಗುನ್ನಾ ಸ್ಥಳ ಸಾರ್ವಜನಿಕರು ಓಡಾಡುವ ರಸ್ತೆ ಅಂದರೆ ಸರಿ. ಅದು ಟಾರ್ ರಸ್ತೆಯಾಗಿರುತ್ತದೆ ಅಂದರೆ ಸರಿ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ನಡೆದಿಲ್ಲ ಮತ್ತು ನಾನು ಅದಕ್ಕೆ ನಾನು ಸಹಿ ಮಾಡಿಲ್ಲ ಅಂದರೆ ಸರಿಯಲ್ಲ. ನನ್ನ ಸಮಕ್ಷಮ ಆರೋಪಿತರಿಂದ ಯಾವುದೇ ಗಾಂಜಾವನ್ನು ಜಪ್ತು ಪಡಿಸಿಕೊಂಡಿಲ್ಲ ಅಂದರೆ ಸರಿಯಲ್ಲ. ಪೋಲಿಸರೇ ಸೃಷ್ಟಿ ಮಾಡಿ ಮು ಮಾ ವನ್ನು ಪ್ರಕರಣದಲ್ಲಿ ಸೇರಿಸಿರುತ್ತಾರೆ ಅಂದರೆ ಸರಿಯಲ್ಲ. ಪೋಲಿಸರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.